## ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 34 ಎಸ್‌ಟಿಬಿ 2010

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 15-03-2010

**ಜನಗಣತಿ**

**ಅತ್ಯಂತ ಜರೂರು**

## ಅಧಿಸೂಚನೆ

ವಿಷಯ: ಭಾರತದ ಜನಗಣತಿ 2011- ಮನೆಗಳ ಪಟ್ಟಿ ಮಾಡುವುದು ಮತ್ತು ಮನೆಯಲ್ಲಿರುವ ಜನರ ಗಣತಿ ಮಾಡುವುದು ಹಾಗೂ ರಾಷ್ಟ್ರ ಜನಸಂಖ್ಯೆ ನೋಂದಣಿ ಪುಸ್ತಕವನ್ನು ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿ ಶಾಲಾ ಶಿಕ್ಷಕರನ್ನು ನಿಯುಕ್ತಿಗೊಳಿಸುವ ಕುರಿತು

ಉಲ್ಲೇಖ: 1. ದಿನಾಂಕ 02-03-2010ರ ಅಧಿಸೂಚನೆ ಸಂಖ್ಯೆ: ಆರ್‌ಡಿ 102 ಇಟಿಸಿ 2009

2. ದಿನಾಂಕ 10-03-2010ರ ಭಾರತ ಸರ್ಕಾರದ ಗೃಹ ಮಂತ್ರಾಲಯದ ಜನಗಣತಿ ನಿರ್ದೇಶಕರ ಅ.ಸ.ಪತ್ರ ಸಂಖ್ಯೆ : C&T/7/ORG/2009

* *******

ಮೇಲೆ ಉಲ್ಲೇಖಿಸಲಾದ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧಿಸೂಚನೆಯಲ್ಲಿ ಭಾರತದ ಜನಗಣತಿ 2011- ಮನೆಗಳ ಪಟ್ಟಿ ಮಾಡುವುದು ಮತ್ತು ಮನೆಯಲ್ಲಿರುವ ಜನರ ಗಣತಿ ಮಾಡುವುದು ಹಾಗೂ ರಾಷ್ಟ್ರ ಜನಸಂಖ್ಯೆ ನೋಂದಣಿ ಪುಸ್ತಕವನ್ನು ಸಿದ್ಧಪಡಿಸುವ ಕುರಿತಂತೆ ಸಾಮಾನ್ಯ ಸೂಚನೆಗಳನ್ನು ನೀಡಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

2. ಈ ಸಂಬಂಧ ಮೇಲೆ ಉಲ್ಲೇಖಿಸಲಾದ (2)ರಲ್ಲಿ ಭಾರತ ಸರ್ಕಾರದ ಗೃಹ ಮಂತ್ರಾಲಯದ ಜನಗಣತಿ ನಿರ್ದೇಶಕರು ತಮ್ಮ ಪತ್ರದಲ್ಲಿ ಭಾರತದ ಜನಗಣತಿ 2011ರ ಕಾರ್ಯಕ್ರಮ ಸಮೀಪಿಸುತ್ತಿರುವ ಕಾರಣ ಸಿಬ್ಬಂದಿಗಳಿಗೆ ಸದರಿ ಕಾರ್ಯಕ್ರಮದಲ್ಲಿ ಸೂಕ್ತ ತರಬೇತಿಯನ್ನು ನೀಡಬೇಕಾಗಿರುವ ಹಿನ್ನಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರುಗಳನ್ನು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಅನುವುಮಾಡಿಕೊಡಲು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲಾ ಶಿಕ್ಷಕರುಗಳ ಪಟ್ಟಿಯೊಂದನ್ನು ಒದಗಿಸುವಂತೆ ಸಂಬಂಧಪಟ್ಟವರಿಗೆ ಸೂಚಿಸುವಂತೆ ಕೋರಿರುತ್ತಾರೆ.

3. ಮುಂಬರುವ ಭಾರತದ ಜನಗಣತಿ 2011 ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ಶಾಲಾ ಶಿಕ್ಷಕರುಗಳು ಸಕ್ರಿಯವಾಗಿ ಪಾಲ್ಗೊಳ್ಳುವುದು ಅನಿವಾರ್ಯವೆಂದು ಮನಗಾಣಲಾಗಿದೆ.

4. ಆದ್ದರಿಂದ, ಮುಂಬರುವ ಭಾರತದ ಜನಗಣತಿ 2011ರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರುಗಳ ಪಟ್ಟಿಯನ್ನು ತುರ್ತಾಗಿ ಭಾರತ ಸರ್ಕಾರದ ಗೃಹ ಮಂತ್ರಾಲಯದ ಜನಗಣತಿ ನಿರ್ದೇಶನಾಲಯ, E&F Wing, 7ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು- 560034, ಇವರಿಗೆ ತುರ್ತಾಗಿ ಒದಗಿಸುವಂತೆ ಸೂಚಿಸಲಾಗಿದೆ. ಮುಂದುವರೆದು, ಸದರಿ ಜನಗಣತಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಶಿಕ್ಷಕರುಗಳು ಜನಗಣತಿ ಅವಧಿಯಲ್ಲಿ ಶಾಲೆಗಳಿಗೆ ರಜೆ ಘೋಷಿಸಿದ್ದಾಗ್ಯೂ, ಸಹ ತಾವು ಸೇವೆ ಸಲ್ಲಿಸುತ್ತಿರುವ

ಕಾರ್ಯಸ್ಥಾನದಲ್ಲಿ ( Respective stations) ಕಡ್ಡಾಯವಾಗಿ ಇರಲು ಹಾಗೂ ಜನಗಣತಿ ನಿರ್ದೇಶನಾಲಯವು ಭಾರತ ಜನಗಣತಿ 2011ರ ಸಂಬಂಧ ಸೂಚಿಸುವ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸಲು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡುವಂತೆ ಅಗತ್ಯ ಕ್ರಮ ವಹಿಸಲು ಈ ಮೂಲಕ ಆದೇಶಿಸಲಾಗಿದೆ.

5. ಅನಾರೋಗ್ಯದಂತಹ ಅನಿರೀಕ್ಷಿತ ಪ್ರಕರಣಗಳನ್ನು ಹೊರತುಪಡಿಸಿ ಜನಗಣತಿ ಕಾರ್ಯದಿಂದ ವಿನಾಯಿತಿಗಾಗಿ ಶಾಲಾ ಶಿಕ್ಷಕರುಗಳಿಂದ ಯಾವುದೇ ಅರ್ಜಿಗಳನ್ನು ಪುರಸ್ಕರಿಸಬಾರದು. ಈ ರೀತಿ ವಿನಾಯಿತಿ ನೀಡಬೇಕಾಗಿದ್ದಲ್ಲಿ, ಜನಗಣತಿ ಅಧಿಕಾರಿಗಳ ಪೂರ್ವಾನುಮತಿ ಪಡೆಯತಕ್ಕದ್ದು

6. ತರಬೇತಿ ಮತ್ತು ಜನಗಣತಿ ಕಾರ್ಯಕ್ಕಾಗಿ ಆಯ್ಕೆ ಮಾಡಲಾದ ಶಾಲಾ ಶಿಕ್ಷಕರುಗಳನ್ನು ಅಸಾಧಾರಣ ಸಂದರ್ಭಗಳನ್ನು ಹೊರತುಪಡಿಸಿ ಜೂನ್ 2010ರ ಅಂತ್ಯದವರೆಗೆ ವರ್ಗಾಯಿಸಬಾರದೆಂದು ಸಹ ಆದೇಶಿಸಿದೆ.

7. ತರಬೇತಿ ಮತ್ತು ಜನಗಣತಿ ಕಾರ್ಯಕ್ಕಾಗಿ ಆಯ್ಕೆ ಮಾಡಲಾದ ಶಾಲಾ ಶಿಕ್ಷಕರುಗಳು ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಮತ್ತು ಜನಗಣತಿ ಕರ್ತವ್ಯದ ನಿರ್ವಹಣೆಯಲ್ಲಿ ಯಾವುದೇ ನಿರ್ಲಕ್ಷ್ಯವನ್ನು ತೋರಿದರೆ ಅದನ್ನು ಕರ್ತವ್ಯ ಲೋಪವೆಂದು ಪರಿಗಣಿಸಿ ಜನಗಣತಿ ಅಧಿನಿಯಮ 1948 ಮತ್ತು ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳ ಅನ್ವಯ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದಾಗಿ ಸಂಬಂಧಪಟ್ಟವರಿಗೆ ಮನವರಿಕೆ ಮಾಡಲು ಸಹ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಎಸ್.ಸೋಮಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು- ಇವರ ರಾಜ್ಯಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ, ಅದರ 50 ಪ್ರತಿಗಳನ್ನು ಶಿಕ್ಷಣ ಇಲಾಖೆಗೆ ಒದಗಿಸುವುದು.

ಪ್ರತಿ:

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ
4. ನಿರ್ದೇಶಕರು (ಪ್ರಾಥಮಿಕ)ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
5. ನಿರ್ದೇಶಕರು (ಪ್ರೌಢ)ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
6. ಕರ್ನಾಟಕ ಜನಗಣತಿ ಕಾರ್ಯಗಳ ನಿರ್ದೇಶಕರು, 7ನೇ ಮಹಡಿ, ಎಫ್ ವಿಂಗ್, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು- 560034

ಪ್ರತಿ:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ), ರವರ ಆಪ್ತ ಸಹಾಯಕರು,
2. ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ), ರವರ ಆಪ್ತ ಸಹಾಯಕರು